

# ಭೀಮ ಯುಗಳ

## ತೆಲಂಗಾಣ-ಆಂಧ್ರಪ್ರದೇಶಗಳಲ್ಲಿ ಸಂವಿಧಾನ ಶಿಲ್ಪಿಯ ಬೃಹತ್ ಪ್ರತಿಮೆಗಳು

**ದಕ್ಷಿಣ ಭಾರತದ ಮಟ್ಟಿಗೆ ಈ ಬಾರಿಯ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿ ವಿಶೇಷವಾದುದು. ತೆಲುಗು ಭಾಷಿಕರ ಎರಡು ರಾಜ್ಯಗಳಲ್ಲಿ ಅಂಬೇಡ್ಕರರ ಬೃಹತ್ ಪ್ರತಿಮೆಗಳು ದೀನ ದಲಿತರ ಆತ್ಮವಿಶ್ವಾಸ ಮತ್ತು ಆತ್ಮಾಭಿಮಾನದ ಪ್ರತೀಕದಂತೆ ತಲೆಯೆತ್ತಿ ನಿಂತಿವೆ.**

ತೆಲುಗು ಭಾಷಿಕರ ಎರಡು ರಾಜ್ಯಗಳು 'ಭೀಮಮುದ್ರೆ'ಯ ಸ್ಪರ್ಶದ ಸಂಭ್ರಮದಲ್ಲಿವೆ. ತೆಲಂಗಾಣದ ಹೈದರಾಬಾದ್ ಹಾಗೂ ಆಂಧ್ರಪ್ರದೇಶದ ವಿಜಯವಾಡಗಳಲ್ಲಿ ಅಂಬೇಡ್ಕರರ ಬೃಹತ್ ಪ್ರತಿಮೆಗಳು ತಲೆಯೆತ್ತಿ ನಿಂತಿವೆ.

ಪ್ರವಾಸಿಗರಿಗೆ ತೆರೆದುಕೊಂಡಿರುವ ದೇಶದ ಪ್ರಸಿದ್ಧ ನಗರಗಳಲ್ಲಿ 'ಮುತ್ತಿನ ನಗರಿ' ಹೈದರಾಬಾದ್ ಕೂಡ ಒಂದು. ಈ ನಗರದ ಪ್ರವಾಸಿ ಖ್ಯಾತಿಗೆ ಹೊಸ ಸೇರ್ಪಡೆ, 125 ಅಡಿ ಎತ್ತರದ ಅಂಬೇಡ್ಕರ್ ಪ್ರತಿಮೆ! ದೇಶದ ಬೃಹತ್ ಅಂಬೇಡ್ಕರ್ ಪ್ರತಿಮೆಗಳಲ್ಲಿ ಇದೂ ಒಂದು. ಅಂಬೇಡ್ಕರ್ ಅವರ 125ನೇ ಜನ್ಮದಿನಾಚರಣೆ ಸಂದರ್ಭದಲ್ಲಿ 125 ಅಡಿಗಳ ಬೃಹತ್ ಪ್ರತಿಮೆ ತಲೆಯೆತ್ತಿದೆ. ಎಡಗೈಯಲ್ಲಿ ಸಂವಿಧಾನ ಹಿಡಿದು ನಿಂತಿರುವ ಭೀಮರಾಯ ಅಂಬೇಡ್ಕರರು ಪ್ರಜಾಪ್ರಭುತ್ವದ ಸೊಬಗನ್ನು ಸಾರುವಂತೆ ಕಾಣಿಸುತ್ತಿದ್ದಾರೆ.

11 ಎಕರೆ ಪ್ರದೇಶದಲ್ಲಿ, ಸುಮಾರು 145 ಕೋಟಿ ರೂಪಾಯಿ ವೆಚ್ಚದಲ್ಲಿ ಅಂಬೇಡ್ಕರ್ ನೆನಪುಗಳ ತಾಣ ರೂಪುಗೊಂಡಿದೆ. ಮಹಾರಾಷ್ಟ್ರದ ಪ್ರಸಿದ್ಧ ಶಿಲ್ಪಿಗಳಾದ ರಾಮ್ ವಿ. ಸುತಾರ್ ಅನಿಲ್ ಸುತಾರ್ ಈ ಯೋಜನೆಯ ವಿನ್ಯಾಸಕಾರರು. ಅಂಬೇಡ್ಕರ್ ಅವರ 125ನೇ ಜನ್ಮದಿನಾಚರಣೆ ವರ್ಷ 2016ರಲ್ಲಿ ಆರಂಭಗೊಂಡ ಈ ಯೋಜನೆ ಇದೀಗ ಪೂರ್ಣಗೊಂಡು ನೋಡುಗರ ಕಣ್ಮನ ಸೆಳೆಯುತ್ತಿದೆ.

